ದೈವಶಕ್ತಿಗೆ ಹಾತೊರೆಯುತ್ತದೆ. ಇದು ದೈವ ಎಂದು ಮಾತ್ರ ಅರ್ಥಮಾಡಿಕೊಳ್ಳಬೇಕಾಗಿಲ್ಲ. ಜೊತೆಯ ಜೀವಿಯನ್ನು ಅರ್ಥಮಾಡಿಕೊಳ್ಳುವುದೇ ದೈವೀಗುಣ ಎನ್ನುವುದಾದರೆ ಆ ಗುಣಕ್ಕಾಗಿ ಈ ಕಥೆ ಹಂಬಲಿಸುತ್ತದೆ. ಇದನ್ನು ಬಾನು ಅವರ ಎರಡನೆಯ ಘಟ್ಟದ ಪ್ರಾತಿನಿಧಿಕ ಕಥೆ ಎನ್ನಬಹುದು.

'ಬಡವರ ಮಗಳು ಹೆಣ್ಣಲ್ಲ' ಕಥೆ ಇವರ ಮೂರನೆಯ ಘಟ್ಟದ ಪ್ರಾತಿನಿಧಿಕ ನೆಲೆಯಾಗಿ ನೋಡಬಹುದು. ಈ ಘಟ್ಟದಲ್ಲಿ ಹಲವು ಬಗೆಯ ಉತ್ತರಗಳನ್ನು ಕಂಡುಕೊಂಡಿದ್ದಾರೆ ಬಾನು. ಈ ಕಥೆಯ ನಾಯಕಿ ಸಾಜಿದ ಹಿಂಸಾತ್ಮಕವಾದ ಉತ್ತರವನ್ನು ಕಂಡುಕೊಂಡಿದ್ದಾಳೆ ಎನ್ನಿಸಿದರೂ, ಹೆಣ್ಣಿನ ಮೇಲಿನ ಕೊನೆಯಿಲ್ಲದ ಹಿಂಸೆಯ ಎದುರು ಈ ಆತ್ಮಹತ್ಯಾತ್ಮಕವಾದ ಉತ್ತರ ಗಂಡು ಮತ್ತು ಹೆಣ್ಣು ಇಬ್ಬರನ್ನೂ ಬಡಿದೆಬ್ಬಿಸುವ ಆಶಯದ್ದು ಎನ್ನಿಸಿ, ಇದೂ ಒಂದು ಹಂತವನ್ನು ಹೆಣ್ಣು ದಾಟಲೇಬೇಕೇನೋ ಎನ್ನುವ ಸಮಾಧಾನವನ್ನು ಓದುಗರು ಪಡೆಯಬಹುದೇನೋ. ತನ್ನನ್ನು ಬಳಸಿ ಬಿಸಾಡಬಯಸುವ ಮೌಲ್ಯವ್ಯವಸ್ಥೆಯನ್ನು ಎದುರಿಸಲು ನಾಯಕಿ ಈ ಎಲ್ಲ ಹುನ್ನಾರದ ಮುಖಂಡನನ್ನೂ ತನ್ನ ಜೊತೆಗೇ ಸಾವಿನ ದವಡೆಗೆ ಒಯ್ಯುತ್ತಾಳೆ. ಹಾಳಾದ ತನ್ನ ಬದುಕನ್ನು ಸರಿಮಾಡಿಕೊಳ್ಳಲು ಅವಕಾಶವಿಲ್ಲದಿದ್ದಾಗ, ಲೋಕ ಸಾಮಾನ್ಯವಾಗಿ ಹೆಣ್ಣು ಆತ್ಮಹತ್ಯೆ ಮಾಡಿಕೊಳ್ಳಲಿ ಎಂದು ಬಯಸುತ್ತದೆ. ಇಲ್ಲಿ ನಾಯಕಿ ಅದನ್ನು ಮಾಡುತ್ತಲೇ ಇದರ ಪ್ರಮುಖ ಪಾತ್ರಧಾರಿಯ ಮೇಲೂ ಸೀಮೆಎಣ್ಣೆ ಸುರಿದು, ತನ್ನ ಮೇಲೂ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳುತ್ತಾಳೆ.

'ಹಸೀನಾ' ಹೆಸರಿನಲ್ಲಿ ಸಿನಿಮಾ ಆಗಿರುವ 'ಕರಿನಾಗರಗಳು' ಬಾನು ಅವರ ಮತ್ತೊಂದು ಯಶಸ್ವಿ ಕಥೆ. ಇಲ್ಲಿ ಇವರ ಕಥೆಗಳ ಧಾತುಗಳೆಲ್ಲ ಅಪೂರ್ವವಾಗಿ ಬೆಸೆದುಕೊಂಡಿವೆ. ಹೆಣ್ಣಿನ ಕೆಚ್ಚು ಹೆಚ್ಚಾದಷ್ಟೂ ವ್ಯವಸ್ಥೆಯ ಕ್ರೌರ್ಯವೂ, ಹಟವೂ ಹೆಚ್ಚಾಗುತ್ತಲೇ ಹೋಗುವ ಕಹಿ ಸತ್ಯ ಈ ಕಥೆಯಲ್ಲಿದೆ. ಈ ಕಥೆಯಲ್ಲಿನ ಮುಖ್ಯವಾದ ಅಂಶ ಯಾವುದೆಂದರೆ, ಹೆಣ್ಣುಮಕ್ಕಳ ಒಗ್ಗಟ್ಟು. ಎಲ್ಲ ರೀತಿಯಲ್ಲೂ ಇಲ್ಲಿನ ಹೆಣ್ಣುಮಕ್ಕಳು ಸಂತ್ರಸ್ತೆಯ ಜೊತೆಗಿದ್ದಾರೆ, ಎಷ್ಟರ ಮಟ್ಟಿಗೆಂದರೆ, ಸ್ವತಃ ಧಾರ್ಮಿಕ ಮುಖಂಡನ ಹೆಂಡತಿಗೂ ಗಂಡನ ಬಗೆಗೆ ತಿರಸ್ಕಾರ ಮಾತ್ರವಲ್ಲ, ಅಸಹ್ಯದ ಭಾವವಿದೆ. ಧರ್ಮದ ಹೆಸರಿನಲ್ಲಿ ಅವರು ಆ ಹೆಣ್ಣಿಗೆ ಅನ್ಯಾಯವನ್ನು ಮುಂದುವರಿಸಿ, ಅವಳನ್ನು ಸೋಲಿಸಿದೆವು ಎಂದು ಕೊಳ್ಳಬಹುದು. ಆದರೆ ಇಡೀ ಸ್ತ್ರೀಕುಲವೇ ಧರ್ಮ ಮತ್ತು ಗಂಡಾಳಿಕೆಯ ಧಿಮಾಕನ್ನು ಥೀ ಥೂ ಎಂದು ಉಗಿದು ಧಿಕ್ಕರಿಸುತ್ತದೆ. ನೈತಿಕವಾಗಿ ಗಂಡಾಳಿಕೆ ಮತ್ತು ಧರ್ಮ ಎರಡನ್ನೂ ಹೆಣ್ಣು ಮಕ್ಕಳು ಧೀರವಾಗಿ ಸೋಲಿಸುವ ಕಥೆ ಇದು. ಅಶ್ರಫ಼ಳ ಮಗಳು ಕಾಯಿಲೆ, ಹಸಿವೆಯಿಂದ ಸಾಯುತ್ತಾಳೆ. ಆದರೆ ಅದು ಕೊಲೆ ಎನ್ನುವುದನ್ನು ಲೋಕವೇ ಒಪ್ಪುವ ವಾತಾವರಣವೂ ಅಲ್ಲಿ ಸೃಷ್ಟಿಯಾಗುತ್ತದೆ. ಕಥೆಯ ಕೊನೆಯಲ್ಲಿ ಮುತುವಲ್ಲಿ ಸಾಹೇಬನ ಹೆಂಡತಿಯೇ ಬೇಸತ್ತು ತಾಯಿ ಮನೆಗೆ ಹೋಗುತ್ತಾಳೆ, ಮಕ್ಕಳನ್ನು ನೋಡಿಕೋ ಎಂದು ಆತನಿಗೆ ಹೇಳಿ. ಮತ್ತೆ ಜಿ.ಎಸ್.ಎಸ್. ಅವರ ಮಾತೇ ನೆನಪಾಗುತ್ತಿದೆ, 'ದಾಟಿ ಬಾ ನಿರ್ಭಯದ ನಿಲುವಿಗೆ' ಎಂದು ಎಲ್ಲ ಹೆಣ್ಣು ಮಕ್ಕಳಿಗೂ ಈ ಕವಿತೆಯಲ್ಲಿ ಅವರು ಕರೆ ಕೊಡುತ್ತಾರೆ. ಹಾಗೆ ನಿಲುವು ತೆಗೆದುಕೊಳ್ಳುವ ಗಳಿಗೆ 'ಅಮೃತ ಮುಹೂರ್ತ'ವೂ ಹೌದು ಎನ್ನುವುದಾದರೆ, ಇದೊಂದು ಅಮೃತ ಗಳಿಗೆ. ಇದಕ್ಕೆ ಅಪಾರ ಬೆಲೆ ತೆರಬೇಕು ಎನ್ನುವುದು ನಿಜ. ಆದರೆ ಬೇರೆ ದಾರಿಯಿಲ್ಲ ಹೆಣ್ಣಿಗೆ. ಬಾನು ಅವರ 'ಎದೆಯ ಹಣತೆ' ಕಥೆಯಾದರೂ ಇಂಥದ್ದೇ ಅಮೃತ ಮುಹೂರ್ತವನ್ನು ಕಣ್ಣೆದುರಿಗೆ ನಿಲ್ಲಿಸುತ್ತದೆ. ಅಪ್ಪನಿಗಾಗಿ ಸಾಯಲು ಹೊರಟ ನೀನು ನಮಗಾಗಿ ಬದುಕಲಾರೆಯ ಎಂದು ಕೇಳುವ ಮಗಳು ಜ್ಞಾನೋದಯದ ಸಂಕೇತವಾಗುತ್ತಾಳೆ. ಆತ್ಮಬಲದಿಂದ ಬದುಕನ್ನು ಎದುರಿಸುವ ಸತ್ಯದ ಪುನರ್ ದರ್ಶನದ ಗಳಿಗೆಯೂ ಹೌದು ಇದು. ಎದೆಯ ಹಣತೆಯ ಬಲದಿಂದಲೇ ಹೆಣ್ಣು ಸದಾ ಬದುಕಿರುವುದು.

ಬಾನು ಹೆಣ್ಣಿನ ಸವಾಲುಗಳನ್ನು ಮಾತ್ರ ನೋಡುತ್ತಾರೆ ಎಂದಲ್ಲ, ಹೆಣ್ಣಿನ ಮೂಲಕ ಲೋಕವನ್ನು ನೋಡುತ್ತಲೇ ಹೆಣ್ಣಿನ ಜೊತೆ ಲೋಕದ ಇತರೆಲ್ಲ ಸಂಗತಿಗಳನ್ನೂ ಇಷ್ಟೇ ಆಸ್ಥೆಯಿಂದ ಗಮನಿಸುತ್ತಾರೆ, ಸ್ಪಂದಿಸುತ್ತಾರೆ. ಹೆಣ್ಣಿನಿಂದ ಆರಂಭವಾಗಿ ಹೆಣ್ಣಿನಲ್ಲೇ ಇವರ ಕಥೆಗಳು ಮುಗಿಯುವುದಿಲ್ಲ ಎನ್ನುವುದೇ ಇವರ ಕಥೆಗಳನ್ನು ಲೋಕೋವಿಸ್ತಾರದ ಭಿತ್ತಿಯಲ್ಲಿ